ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಗುರುಪ್ರಸಾದ್ ಅವರು ಈ ಹಾಸ್ಪಲ್ ಮೇನೇಜ್‌ಮೆಂಟ್ ಬಗ್ಗೆ ಈಗಾಗಲೇ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರ ವರದಿಯಲ್ಲಿ ಸಹ ಇದೇ ಮಾತನ್ನು ಹೇಳಿದ್ದಾರೆ ಮತ್ತು ಇದಕ್ಕೇ ಒಂದು ಪ್ರತ್ಯೇಕ ಡೈರಕ್ಟರೇಟ್ ರಚನೆಯಾಗಬೇಕೆಂದು ಹೇಳಿದ್ದಾರೆ. ಅವರ ಶಿಫಾರಸ್‌ನ್ನು ನಾವು ತತ್ವಶಃ ಒಪ್ಪಿದ್ದೇವೆ. ಈ ಹಾಸ್ಪಲ್‌ಗಳಿಗೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ಡೈರಕ್ಟರೇಟ್ ರಚನೆ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಸಹ ಈಗಾಗಲೇ ಅನೌನ್ಸ್ ಮಾಡಿದ್ದಾರೆ. ಆದನ್ನು ನಾವು ಕಾರ್ಯರೂಪಕ್ಕೆ ತರುತ್ತಿದ್ದೇವೆ. ಅವರು ಮಾಡಿರುವ ಶಿಫಾರಸ್‌ಗಳ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರು ಕ್ರಮ ತೆಗೆದುಕೊಂಡಿದ್ದಾರೆ. ರೀ-ಆರ್ಗನೈಜೇಷನ್‌ಗೆ ಸಂಬಂಧಪಟ್ಟ ಪ್ರಪೋಸಲ್ ಸಹ ಈಗ ಸರ್ಕಾರದ ಮುಂದಿದೆ. ಈಗ ತಾಲ್ಲೂಕ್ ಮಟ್ಟದಲ್ಲಿರುವಂತಹ ಹಾಸ್ಪಲ್‌ಗಳನ್ನು ನಮ್ಮ ಇಲಾಖಾ ಅಧಿಕಾರಿಗಳಿ ಸೂಪರ್‌ವೈಜ್ ಮಾಡುವ ಬಗ್ಗೆ ನಾವು ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ ಇದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟ ಕೂಡಲೇ ಜಾರಿಗೆ ತರುತ್ತೇವೆ ಮತ್ತು ಇರುವಂತಹ ಲೋಪದೋಷಗಳನ್ನು ಪರಿಪಡಿಸುತ್ತೇವೆ.

ನಿಯಮ ೩೫ಳಿರ ಮೇರೆಗೆ

(೧) ಕೋಲಾರ ಜಿಲ್ಲೆಗೆ ಹೆಚ್ಚು ಬಸ್ಸುಗಳನ್ನು ಒದಗಿಸುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಅಧ್ಯಕ್ಷರೇ,

ಬೆಂಗಳೂರಿನಿಂದ ಕೋಲಾರಕ್ಕೆ (ಕೆ.ಜಿ.ಎಫ್.), ಮಂಗಳಬಾಗಿಲಿಗೆ, ಚಿಂತಾಮಣಿ, ಚಿಕ್ಕಬಳ್ಳಾಪುರಕ್ಕೆ ವಿಪರೀತ ಟ್ರಾಫಿಕ್ ಇರುವ ರಸ್ತೆಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಹಾಕಿರುವ ಬಸ್‌ಗಳು ಏನೇನೂ ಸಾಕಾಗುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ವಿಪರೀತ ತೊಂದರೆಯಾಗಿದೆ. ಮಾನ್ಯ ಸಾರಿಗೆ ಮಂತ್ರಿಗಳು ಇದನ್ನು ಸರಿಪಡಿಸಿ ಹೆಚ್ಚುವರಿ ಬಸ್ಸುಗಳನ್ನು ಕೊಡುವಂತೆ ವ್ಯವಸ್ಥೆ ಮಾಡುವಿರಾ ?

ಈ ಬಗ್ಗೆ ಸಾರ್ವಜನಿಕರು ಮನವಿ ಮಾಡಿಕೊಂಡಿರುವುದರಿಂದ ಮಾನ್ಯ ಸಚಿವರು ಹೆಚ್ಚುವರಿ ಬಸ್ಸುಗಳನ್ನು ಕೊಪಲೇಬೇಕೆಂದು ಈ ಮೂಲಕ ಮನವಿಯನ್ನು ಮಾಡುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಇಲಾಖೆ ರಾಜ್ಯ ಮಂತ್ರಿಗಳು),—ಮಾನ್ಯ ಅಧ್ಯಕ್ಷರೇ,

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರಿಗೆ ಬೇಡಿಕೆಗನುಗುಣವಾಗಿ ಸಾರಿಗೆ ಸೇವೆಯನ್ನು ನೀಡುತ್ತಿದೆ. ಬೇಡಿಕೆ ಹೆಚ್ಚಿದಾಗಲೆಲ್ಲಾ ಬಸ್ಸುಗಳನ್ನು ಸಹಾ ಹೆಚ್ಚಿಸಲಾಗುತ್ತಿದೆ. ಅಲ್ಲದೆ ಭಾರಿ ವಾಹನಗಳ ಓಡಾಟಕ್ಕೆ ಯೋಗ್ಯವಾದ ರಸ್ತೆಗಳು ನಿರ್ಮಾಣವಾದಗಲೆಲ್ಲಾ ಹೊಸದಾಗಿ ಸಾರಿಗೆ ಸೇವೆಯನ್ನು ಅಂತಹ ಮಾರ್ಗಗಳಲ್ಲಿ ನೀಡಲಾಗುತ್ತಿದೆ. ಈ ಕೆಳಕಂಡ ಪಟ್ಟಿಯು ಕಾಲಕಾಲಕ್ಕೆ ಹೆಚ್ಚಿಸಲಾದ ಮಾರ್ಗಸೂಚಿಗಳ ಸಂಖ್ಯೆಯನ್ನು ತೋರಿಸುತ್ತದೆ.

ವರ್ಷ	ಮಾರ್ಗಸೂಚಿಗಳ ಸಂಖ್ಯೆ	ಪರಿಣಾಮಕಾರಿ ಕಿ.ಮೀ.ಗಳಲ್ಲಿ (ಪ್ರತಿದಿನ) ಲಕ್ಷಗಳಲ್ಲಿ)	ದಿನವಹಿ ಒಯ್ಯಲಾದ ಪ್ರಯಾಣಿಕರು (ಲಕ್ಷಗಳಲ್ಲಿ)
೧	೨	೩	೪
೧೯೮೧–೮೨	೪೪೫೯	೧೧–೨೨	೨೬–೫೧
೧೯೮೨–೮೩	೪೮೭೬	೧೩–೪೦	೩೦–೦೦
೧೯೮೩–೮೪	೫೧೮೯	೧೪–೧೦	೩೨–೯೦
೧೯೮೪–೮೫	೫೪೧೯	೧೫–೧೦	೩೪–೮೨
೧೯೮೫–೮೬	೬೦೨೦	೧೭–೮೮	೪೦–೧೯

ನಿಗಮವು ಬೆಂಗಳೂರಿನಿಂದ ಕೋಲಾರ, ಕೆ.ಜಿ.ಎಫ್., ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಮುಳಬಾಗಿಲುಗಳಿಗೆ ಬಸ್ಸುಗಳನ್ನು ಓಡಿಸುತ್ತಿದ್ದು ಪ್ರಯಾಣಿಕರ ಸರಾಸರಿ ಸಂಖ್ಯೆ ಈ ಕೆಳಕಂಡತಿದ್ದು ಪುಸಕ್ತ ಸಾರಿಗೆ ಅಗತ್ಯಕ್ಕೆ ಪೂರಕವಾಗಿದೆ.

ಮಾರ್ಗ		ಪ್ರಯಾಣಿಕರ ಸರಾಸರಿ ಸಂಖ್ಯೆ
೧		೨
ಬೆಂಗಳೂರು—ಕೋಲಾರ	...	೬೫ ರಿಂದ ೭೦ ಶೇ.
ಬೆಂಗಳೂರು—ಕೆ.ಜಿ.ಎಫ್.	...	೬೮ ರಿಂದ ೭೫ ಶೇ.
ಬೆಂಗಳೂರು—ಚಿಂತಾಮಣಿ	...	೭೦ ರಿಂದ ೭೫ ಶೇ.
ಬೆಂಗಳೂರು—ಚಿಕ್ಕಬಳ್ಳಾಪುರ	...	೬೩ ರಿಂದ ೬೯ ಶೇ.
ಬೆಂಗಳೂರು—ಮುಳಬಾಗಿಲು	...	೬೦ ರಿಂದ ೬೪ ಶೇ.

ಈ ಐದು ಸ್ಥಳಗಳಿಗೆ ಬೆಂಗಳೂರಿನಿಂದ ಓಡಿಸುತ್ತಿರುವ ಬಸ್ಸು ಸಂಖ್ಯೆ ಈ ಕೆಳಕಂಡಂತಿದೆ.

ಮಾರ್ಗ	ಪ್ರಾರಂಭವಾಗುವ ಟ್ರಿಪ್ಪುಗಳು	ಹಾಯ್ದು ಹೋಗುವ ಟ್ರಿಪ್ಪುಗಳು	ಒಟ್ಟು
೧	೨	೩	೪
ಬೆಂಗಳೂರು—ಕೋಲಾರ	೨೨	೭೧	೯೩
ಬೆಂಗಳೂರು—ಕೆ.ಜಿ.ಎಫ್.	೩೭	೦೫	೪೨
ಬೆಂಗಳೂರು—ಮುಳಬಾಗಿಲು	೦೬	೧೮	೨೪
ಬೆಂಗಳೂರು—ಚಿಕ್ಕಬಳ್ಳಾಪುರ	೩೩	೨೨	೫೫
ಬೆಂಗಳೂರು—ಚಿಂತಾಮಣಿ	೪೦	೧೧	೫೧

ನಿಗಮವು ಓಡಿಸುತ್ತಿರುವ ಬಸ್ಸುಗಳಲ್ಲದೆ ಖಾಸಗೀ ವಾಹನಗಳು ಸಹಾ ಬೆಂಗಳೂರಿನಿಂದ ಈ ಸ್ಥಳಗಳ ಮಾರ್ಗವಾಗಿ ಪರರಾಜ್ಯದ ಸ್ಥಳಗಳಿಗೂ ಹಾಗೂ ಬೇರೆ ಮಾರ್ಗಗಳ ಮೂಲಕ ಈ ಸ್ಥಳಗಳಿಗೂ ಸಂಚರಿಸುತ್ತಿವೆ.

ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಕೋಲಾರ ಜಿಲ್ಲೆಯ ಶಾಸಕರ ಒತ್ತಾಯದ ಮೇರೆಗೆ ಮತ್ತು ಸಾರ್ವಜನಿಕರ ಬೇಡಿಕೆಯ ದೃಷ್ಟಿಯಿಂದ ಬೆಂಗಳೂರು ಮತ್ತು ಮೈಸೂರು ಮಾದರಿಯಲ್ಲಿ ಬೆಂಗಳೂರು ಮತ್ತು ಕೋಲಾರಕ್ಕೆ ಮತ್ತು ಕೋಲಾರದಿಂದ ಕೆ.ಜಿ.ಎಫ್‌ಗೆ ತಡೆರಹಿತ ಬಸ್ಸುಗಳನ್ನು ಓಡಿಸುವುದಕ್ಕೆ ಯೋಜನೆ ಮಾಡಿದ್ದೇವೆ. ಈ ಒಂದು ವ್ಯವಸ್ಥೆಯನ್ನು ಮುಂದಿನ ತಿಂಗಳಿಂದ ಅಂದರೆ ಸೆಪ್ಟೆಂಬರ್ ತಿಂಗಳಿಂದ ಮಾಡಿ ಬಸ್ಸುಗಳನ್ನು ಓಡಿಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.